CAUVERY

ಸ್ವಾತಂತ್ರ್ಯದ ಅಮೃತ ಮಹೋತ್ಸವ

# ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನಂ.39, ಯುನೈಟೆಡ್ ಮ್ಯಾನ್‌ಶನ್, 2ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು - 560 001.

ಇ-ಮೇಲ್ : jddekshdc@gmail.com ವೆಬ್‌ಸೈಟ್ : http//www.cauverycrafts.com

ಸಂಖ್ಯೆ: ಕೆ.ಎಸ್.ಹೆಚ್.ಡಿ.ಸಿ/ಬೆಂ/ಗುರುಕುಲ/ಪ್ರಕಟಣೆ/257/2024–25 ದಿನಾಂಕ: 31.05.2024

## ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು "ಶಿಲ್ಪಗುರುಕುಲ"

## ಶಿವಮೊಗ್ಗ ಜಿಲ್ಲೆಯ ಸಾಗರದ ಶ್ರೀಗಂಧದ ಕಲಾ ಸಂಕೀರ್ಣದಲ್ಲಿ ಕಲ್ಲು ಕೆತ್ತನೆ ಮತ್ತು ಮರದ ಕೆತ್ತನೆ ತರಬೇತಿ ಕೋರ್ಸ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**10 ತಿಂಗಳ ಸರ್ಟಿಫಿಕೇಟ್ ಕೋರ್ಸ್**
**ಕಲ್ಲು ಕೆತ್ತನೆ ಮತ್ತು ಮರದ ಕೆತ್ತನೆ**
**ಜುಲೈ -2024 ರಿಂದ ಏಪ್ರಿಲ್-2025 ರವರೆಗೆ**

**ಆಯ್ಕೆಗೊಂಡ ಅಭ್ಯರ್ಥಿಗಳಿಗೆ**
**ಮಾಸಿಕ ರೂ.1,500**
**ಸ್ಟೈಫಂಡ್ ನೀಡಲಾಗುತ್ತದೆ.**

### ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ: 21-06-2024

| | |
|---|---|
| ವಿದ್ಯಾರ್ಹತೆ : | ಕನಿಷ್ಠ ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿದ್ದು, ಕರಕುಶಲ ಕೆತ್ತನೆ ಚಟುವಟಿಕೆಗಳಲ್ಲಿ ಅಭಿರುಚಿ ಮತ್ತು ಆಸಕ್ತಿ ಹೊಂದಿರಬೇಕು. |
| ವಯೋಮಿತಿ : | 16 ರಿಂದ 35 ವರ್ಷ [ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ] |
| ಸೌಲಭ್ಯಗಳು : | ಊಟ, ವಸತಿ, ತರಬೇತಿ, ಸಮವಸ್ತ್ರ, ಶೈಕ್ಷಣಿಕ ಪ್ರವಾಸ, ಕೆತ್ತನೆಯ ಉಪಕರಣಗಳು ಇತ್ಯಾದಿಗಳನ್ನು ಉಚಿತವಾಗಿ ಒದಗಿಸಲಾಗುವುದು ಹಾಗೂ ಮಾಸಿಕ ರೂ.1,500/- ಸ್ಟೈಫಂಡ್ ನೀಡಲಾಗುತ್ತದೆ. |

ಮೇಲ್ಕಂಡ 10 ತಿಂಗಳ ಅವಧಿಯ ತರಬೇತಿಗೆ ಸೇರ ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಉಚಿತವಾಗಿ ಶ್ರೀ ಗಣೇಶ್ ಸಿಂಗ್ ಪಿ. ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ/ಸೊರಬ/ಶಿರಸಿ/ಕುಮಟ ನಂ. 9945458941, ಶ್ರೀ ನಿಜಾಮುದೀನ್ ಯೋಜನಾಧಿಕಾರಿ, ಬಿದರಿ ಕಲಾ ಸಂಕೀರ್ಣ, ಬೀದರ್ ನಂ.9440088687, ಶ್ರೀ ಕಲೀಮುಲ್ಲಾ ಷರೀಫ್, ಯೋಜನಾಧಿಕಾರಿ, ಎಲ್.ಡಬ್ಲ್ಯೂ.ಸಿ.ಸಿ. ಚನ್ನಪಟ್ಟಣ / ರಾಮನಗರ ನಂ. 9945214618, ಶ್ರೀಮತಿ ಸೇವಂತಿ, ವ್ಯವಸ್ಥಾಪಕರು, ಎಂ.ಸಿ.ಸಿ. ಮೈಸೂರು, ನಂ.8197728284, ಶ್ರೀ ಹರೀಶ್, ಯೋಜನಾಧಿಕಾರಿ, ಬಹು ಕಲಾ ಸಂಕೀರ್ಣ, ಬೆಂಗಳೂರು / ಶಿವಾರಪಟ್ಟಣ ನಂ. 9844271975, ಶ್ರೀ ರಮೇಶ್, ಯೋಜನಾಧಿಕಾರಿ, ನವಲಗುಂದ / ಮುಂಡಗೋಡು / ಕಿನ್ನಾಳ ನಂ. 9845689142 ಇವರಿಂದ ಹಾಗೂ ನಿಗಮದ ವೆಬ್‌ಸೈಟ್ http://www.cauverycrafts.com ಮೂಲಕ ಅರ್ಜಿಗಳನ್ನು ಪಡೆಯಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ದಾಖಲಾತಿ ಪ್ರತಿಗಳೊಂದಿಗೆ ದಿನಾಂಕ: 21.06.2024 ರೊಳಗೆ ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಕೆಳದಿ ರಸ್ತೆ, ಸಾಗರ–577 401 ಶಿವಮೊಗ್ಗ ಜಿಲ್ಲೆ ಹಾಗೂ ಪ್ರಧಾನ ವ್ಯವಸ್ಥಾಪಕರು (ಅಭಿವೃದ್ಧಿ), ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ, ಕೇಂದ್ರ ಕಛೇರಿ, ನಂ.39, 2ನೇ ಮಹಡಿ, ಯುನೈಟೆಡ್ ಮ್ಯಾನ್‌ಷನ್, ಎಂ.ಜಿ. ರಸ್ತೆ, ಬೆಂಗಳೂರು–560 001 ಇವರಿಗೆ ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ. ದಿನಾಂಕ: 21.06.2024 ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಯೋಜನಾಧಿಕಾರಿ, ಶ್ರೀಗಂಧದ ಕಲಾ ಸಂಕೀರ್ಣ, ಸಾಗರ ಇವರನ್ನು ಮೊಬೈಲ್ ಸಂಖ್ಯೆ: 99454 58941 ಮುಖಾಂತರ ಸಂಪರ್ಕಿಸಬಹುದಾಗಿದೆ.

ವಿಶೇಷ ಸೂಚನೆ:–ಸದರಿ ತರಬೇತಿಗೆ ಗರಿಷ್ಠ 30 ಅಭ್ಯರ್ಥಿಗಳನ್ನು ತೆಗೆದುಕೊಳ್ಳಬಹುದಾಗಿದ್ದು, ಅದರಲ್ಲಿ ಆರು (06) ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಮತ್ತು ಎರಡು(02) ಅಭ್ಯರ್ಥಿಗಳು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಯಮಾನುಸಾರ ಮೀಸಲಿರಿಸಲಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು